**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 786/2024**

**ಡಿ.ಡಬ್ಲ್ಯೂಃ 1**

**ಸಾಕ್ಷಿಗೆ ದಿನಾಂಕಃ 02.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

## ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ

1. ದೂರುದಾರರು 2 ವರ್ಷಗಳಿಂದ ಪರಿಚಯ ಇರುತ್ತಾರೆ. ಗವಿಸಿದ್ದಪ್ಪ ತಂದೆ ಪಂಪಣ್ಣ ಅಂದರೆ ನಾನೇ ಆಗಿರುತ್ತೇನೆ. ನಾನು 7 ನೇ ವಾರ್ಡ ಸಿರುಗುಪ್ಪದಲ್ಲಿ ವಾಸ ಇರುವುದಿಲ್ಲ. ನಾನು 16 ನೇ ವಾರ್ಡ ಸಿರುಗುಪ್ಪದಲ್ಲಿ ವಾಸ ಮಾಡುತ್ತೇನೆ. ಆ ಬಗ್ಗೆ ನಾನು ನನ್ನ ಬ್ಯಾಂಕ್ ಗೆ ದಾಖಲೆಗಳನ್ನು ಕೊಟ್ಟು ವಿಳಾಸವನ್ನು ಬದಲಾವಣೆ ಮಾಡಿಕೊಂಡಿರುವುದಿಲ್ಲ. ದಿಃ 31.07.2023 ರಂದು ದೂರುದಾರು ನನ್ನ ಫೋನ ಪೇ ನಂ 8105087788 ಖಾತೆಗೆ ರೂ. 75,000/- ಹಣ ವರ್ಗಾವಣೆ ಮಾಡಿದ್ದರು ಎಂದರೆ ಸರಿಯಲ್ಲ. ನಂತರ ದಿಃ 01.08.2023 ರಂದು ದೂರದಾರರು 14,25,000/- ಹಣವನ್ನು ಆರ್ ಟಿ ಜಿ ಎಸ್ ವರ್ಗಾವಣೆ ಮಾಡಿದ್ದರು ಎಂದರೆ ಸರಿ. ನಾನು ದಿಃ 05.04.2024 ರಂದು ದೂರುದಾರರ ಖಾತೆಗೆ 95,000/- ಜಮೆ ಮಾಡಿದ್ದೆ ಎಂದರೆ ಸರಿ. ದಿಃ 11.01.2024 ರಂದು ರೂ. 49,000/- ಜಮೆ ಮಾಡಿದ್ದೆ ಎಂದರೆ ಸರಿ. ದೂರುದಾರರು ನನಗೆ ಒಟ್ಟು 15 ಲಕ್ಷ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

2. ನಾನು ದೂರುದಾರರಿಗೆ ಒಂದು ಪ್ರಾಮಿಸರಿ ನೋಟ್ ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ. ನಿಪಿಃ 1 ಚೆಕ್ ಬ್ಯಾಂಕ್ ಖಾತೆಯದ್ದು ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಸಲ್ಲಿಸಿದ ವಾಕಲತ್ ಮೇಲಿನ ಸಹಿ ನನ್ನದು ಆಗಿರುತ್ತದೆ. ನಿಪಿಃ 1 ರಲ್ಲಿನ ಸಹಿ

ನನ್ನದಾಗಿರುವುದಿಲ್ಲ. ನನ್ನ ಚೆಕ್ ನ್ನು ಹಿಂತಿರುಗಿಸಲು ದೂರುದಾರರಿಗೆ ನಾನು ನೋಟಿಸ್ ನೀಡಿರುವುದಿಲ್ಲ. ನಿಪಿಃ 1 ರಲ್ಲಿ ಸಹಿ ನನ್ನದು ಇದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಚೆಕ್ ನೀಡಿರುವ ವಿಚಾರ ಸತ್ಯ ಇರುತ್ತದೆ. ಆದರೆ ಅದರಲ್ಲಿರುವ ಸಹಿ ನನ್ನದ್ದಲ್ಲ.

3. ನಾನು ನನ್ನ ಖಾತೆಗೆ ಸಂಬಂಧಪಟ್ಟಂತೆ ಎಲ್ಲಾ ಪುಟಗಳ ವಿವರವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಹಣದ ವರ್ಗಾವಣೆ ನಮೂದು ಇದ್ದ ಪುಟಗಳನ್ನು ಮಾತ್ರ ಹಾಜರುಪಡಿಸಿರುತ್ತೇನೆ. ನಾನು ಉದ್ದೇಶಪೂರ್ವಕವಾಗಿ ಸಂಪೂರ್ಣ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣ ದಾಖಲು ಆದ ನಂತರ ದೂರುದಾರರಿಗೆ ರೂ. 85,000/- ವರ್ಗಾವಣೆ ಮಾಡಿದ್ದೆನೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಿ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**